ಅಸಲು ದಾವೆ ನಂಃ 258/2020 ಪಿ.ಡಬ್ಲ್ಯೂಃ1- ಅಶೋಕ ಡಂಬಳ

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 09-12-2022 ರಂದು ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ ವಿ.ಎಸ್.ಬಂಗರಿ ವಕೀಲರಿಂದಃ**

1. ನಾನು ವ್ಯಾಸಂಗ ಮಾಡಿಲ್ಲ. ನನಗೆ ಸಹಿ ಮಾಡುವಷ್ಟು ಮಾತ್ರ ಕನ್ನಡ ಬರುತ್ತದೆ. ನಾನು ಹುನಗುಂದದಲ್ಲಿ ವಾಸವಾಗಿದ್ದೇನೆ. ಜಕ್ಕಲಿಯಲ್ಲಿ ನನ್ನ ಯಾವುದೇ ಆಸ್ತಿ ಇಲ್ಲ. ಇತ್ತೀಚೆಗೆ ನಾನು ಒಂದು ಆಸ್ತಿಯನ್ನು ಖರೀದಿ ಮಾಡಿದ್ದೇನೆ. ಅಂದಾನಪ್ಪ ತಂದೆ ಬಸಪ್ಪ ಗೌಡಣ್ಣವರ ಇವರು ನನ್ನ ಹೆಂಡತಿ ಕಡೆಯಿಂದ ಸಂಬಂಧಿಕರು. ಅಂದಾನಪ್ಪ ತಂದೆ ಬಸಪ್ಪ ಗೌಡಣ್ಣವರ ಮತ್ತು ಪ್ರತಿವಾದಿಗಳಾದ 1 ರಿಂದ 7ರ ಮನೆತನದ ಬಗ್ಗೆ ನನಗೆ ಪರಿಚಯ ಇಲ್ಲ. ದಾವೆ ಹಾಕಲು ನಮ್ಮ ಬೀಗರಾದ ಅಂದಪ್ಪ ಗೌಡಣ್ಣವರ ಮಾಹಿತಿ ಕೊಟ್ಟಿದ್ದಾರೆ. ನನಗೆ ದಾವೆಯ ಬಗ್ಗೆ ವೈಯಕ್ತಿಕ ಮಾಹಿತಿ ಇಲ್ಲ. ನನಗೆ ಈ ದಾವೆಯಲ್ಲಿ ಏನು ಬರೆದಿದ್ದಾರೆ ಎಂದು ಸ್ವಲ್ಪ ಸ್ವಲ್ಪ ಗೊತ್ತಿದೆ. ನಾನು ನ್ಯಾಯಾಲಯಕ್ಕೆ ಹಾಕಿದ ಮುಖ್ಯವಿಚಾರಣೆ ಪ್ರಮಾಣ ಪತ್ರಕ್ಕೆ ಅಂದಾನಪ್ಪ ತಂದೆ ಬಸಪ್ಪ ಗೌಡಣ್ಣವರ ಇವರ ಮಾಹಿತಿ ನೀಡಿದ್ದಾರೆ. ನನಗೆ ಈ ಪ್ರಮಾಣ ಪತ್ರದಲ್ಲಿ ಬರೆದಂತಹ ವಿಷಯ ನನ್ನ ಬೀಗರಿಗೆ ಗೊತ್ತಿದೆ.

2. ದಾವಾ ಆಸ್ತಿಯ ಸರ್ವೆ ನಂಬರ 3/3 ಆಗಿದೆ. ದಾವಾ ಆಸ್ತಿಯ ಚಕಬಂದಿ ಹೇಳಲು ಬರುವುದಿಲ್ಲ. ದಾವಾ ಆಸ್ತಿ ಯಾವ ಊರಿನ ದಾರಿಯಲ್ಲಿ ಇದೇ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿ ಯಾರ ಹೆಸರಿನಲ್ಲಿ ಇತ್ತು ಎಂದು ನನಗೆ ಗೊತ್ತಿಲ್ಲ, ಅದು ಅಂದಾನಪ್ಪನ ಹೆಸರಿನಲ್ಲಿ ಮಾತ್ರ ಇತ್ತು ಎಂದು ಗೊತ್ತು. ಅಂದಾನಪ್ಪನ ತಂದೆಯ ಹೆಸರು ಬಸಪ್ಪ. ಬಸಪ್ಪನ ತಂದೆಯ ಹೆಸರು ಗೊತ್ತಿಲ್ಲ.

3. ಬಸಪ್ಪನ ತಂದೆಯ ಹೆಸರು ಬಾಳಪ್ಪ ಎಂದರೆ ನನಗೆ ಗೊತ್ತಿಲ್ಲ. ಬಾಳಪ್ಪನಿಗೆ ಯಮನಪ್ಪ ಮತ್ತು ಬಸಪ್ಪ ಎಂಬ ಇಬ್ಬರು ಮಕ್ಕಳು ಇದ್ದರು ಎಂದರೆ ನನಗೆ ಗೊತ್ತಿಲ್ಲ. ಯಮನಪ್ಪ ಪೋತಿಯಾಗಿದ್ದು, ಆತನಿಗೆ ಬಸವ್ವ ಮತ್ತು ಈರಪ್ಪ ಎಂಬ ಇಬ್ಬರು ಮಕ್ಕಳು ಇದ್ದರು ಎಂದರೆ ನನಗೆ ಗೊತ್ತಿಲ್ಲ. ಈರಪ್ಪ ಹೆಂಡತಿ ಮಕ್ಕಳು ಇಲ್ಲದೇ ತೀರಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಯಮನಪ್ಪನ ಮಗಳು ಸಹ ಈಗ ತೀರಿಕೊಂಡಿದ್ದಾರೆ ಎಂದರೆ ನಿಜ.

4. ಬಸವ್ವನ ಗಂಡನ ಹೆಸರು ಮಲ್ಲಪ್ಪ ಎಂದರೆ ನಿಜ. 1 ರಿಂದ 7 ನೇ ಪ್ರತಿವಾದಿಗಳು ಮಲ್ಲಪ್ಪನ ಮಕ್ಕಳು ಎಂದರೆ ನಿಜ. ಮೂಲ ಪುರುಷ ಬಾಳಪ್ಪನ ಮಗ ಬಸಪ್ಪನಿಗೆ ಅಂದಾನಪ್ಪ ಒಬ್ಬನೇ ಮಗ ಎಂದರೆ ನಿಜ. ದಾವಾ ಜಮೀನು ಮೂಲತಃ

ಬಾಳಪ್ಪನಿಂದ ಬಂದಿದೆ ಎಂದರೆ ನಿಜ. ಬಾಳಪ್ಪನ ಮಕ್ಕಳಾದ ಯಮನಪ್ಪ ಮತ್ತುಬಸಪ್ಪ ಇವರಿಗೆ ಆ ಜಮೀನಿನನಲ್ಲಿ ಸಮ ಹಿಸ್ಸೆ ಇತ್ತು ಎಂದರೆ ನನಗೆ ಗೊತ್ತಿಲ್ಲ. ಜಕ್ಕಲಿ ಗ್ರಾಮದ ಡ.ನಂ.3371 ರ ಪ್ರಕಾರ ಬಸವ್ವ ಮತ್ತು ಬಸಪ್ಪ ಹೆಸರಿಗೆ ದಾಖಲು ಆಗಿತ್ತು ಎಂದರೆ ಸಾಕ್ಷಿ ನಾನು ಖರೀದಿ ಮಾಡಿದಾಗ ದಾಖಲು ಇಲ್ಲ ಎಂದು ಹೇಳುತ್ತಾರೆ. ನಾನು ಖರೀದಿ ಮಾಡುವಾಗ ಬರೀ ಉತಾರವನ್ನು ಮಾತ್ರ ನೋಡಿದ್ದೇನೆ. ಇವತ್ತಿನವರೆಗೂ ದಾವಾ ಜಮೀನು 1 ರಿಂದ 7 ನೇ ಪ್ರತಿವಾದಿ ಮತ್ತು ಅಂದಾನಪ್ಪನ ಹೆಸರಿನಲ್ಲಿ ಇದೇ ಎಂದರೆ ಸರಿಯಲ್ಲ. ನಾನು ಈಗ ಸರ್ವೆ ನಂಬರ 3/3 ಸನ್ 2021-2022 ರ ಉತಾರವನ್ನು ನೋಡುತ್ತಿದ್ದೇನೆ. ಸದರಿ ಉತಾರದಲ್ಲ 1 ರಿಂದ 7 ನೇ ಪ್ರತಿವಾದಿ ಮತ್ತು ಅಂದಾನಪ್ಪ ಇವರ ಹೆಸರು ಇದೇ ಎಂದರೆ ನಿಜ. ಸಾಕ್ಷಿ ಮುಂದುವರೆದು ನಾನು ಸನ್ 2018 ರಲ್ಲಿ ಖರೀದಿ ಮಾಡಿದ್ದೇನೆ ಎಂದು ಹೇಳುತ್ತಾರೆ. ಸದರಿ ಪಹಣಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ, ಅದನ್ನು ನಿಡಿ-1 ಎಂದು ಗುರುತಿಸಲಾಯಿತು.

5. ಡ.ನಂ. 6348 ರ ಪ್ರಕಾರ ದಾವಾ ಜಮೀನು ಬಸಪ್ಪ ತೀರಿಕೊಂಡ ನಂತರ ಆತನ ಮಗ ಅಂದಾನಪ್ಪ ಮತ್ತು ಬಸವ್ವನ ಹೆಸರಿನಲ್ಲಿ ಮುಂದುವರೆಯಿತು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಬಸವ್ವ ಸನ್ 2006 ರಲ್ಲಿ ತೀರಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಉತ್ತರ ಭಾಗದ ಅರ್ಧ ಜಮೀನಿನಲ್ಲಿ ಬಸವ್ವನ ಮಕ್ಕಳು ದಕ್ಷಿಣ ಭಾಗದಲ್ಲಿ ಅಂದಾನಪ್ಪ ಕಬ್ಜಾದಲ್ಲಿ ಇದ್ದರು ಎಂದರೆ ನನಗೆ

ಗೊತ್ತಿಲ್ಲ, ಸಾಕ್ಷಿ ಅಂದಾನಪ್ಪ ಕಬ್ಜಾದಲ್ಲಿ ಇದ್ದ, ಆದ್ದರಿಂದ ನಾನು ಖರೀದಿ ಮಾಡಿದ್ದೇನೆ ಎಂದು ಹೇಳುತ್ತಾರೆ. ನಾನು ಊರಿನಲ್ಲಿ 4 ಜನರನ್ನು ಕೇಳಿ ಕಬ್ಜದಲ್ಲಿ ಇರುವುದನ್ನು ತಿಳಿದುಕೊಂಡಿರುತ್ತೇನೆ. ನನಗೆ ಆ 4 ಜನರ ಹೆಸರು ಗೊತ್ತಿಲ್ಲ. ನಾನು ಏನು ವಿಚಾರ ಮಾಡದೇ ಖರೀದಿ ಮಾಡಿರುವುದು ನಿಜ. ಅಂದಾನಪ್ಪ ನಾನು ಮನೆ ಕಟ್ಟಿಸಿದ್ದೇನೆ ಸಾಲ ಆಗಿದೇ ಎಂದು ದಾವಾ ಜಮೀನು ಮಾರಾಟ ಮಾಡಿದ್ದಾರೆ. ಅಂದಾನಪ್ಪ ಗೌಡಣ್ಣವರು ಬದುಕಿದ್ದಾರೆ. ಅಂದಾನಪ್ಪ ಕಡೆಯಿಂದ ನಾನು ಸಾಕ್ಷಿ ಮಾಡಿಸುತ್ತೇನೆ. ಅಂದಾನಪ್ಪ ತಲಾಟಿಯವರಿಗೆ ತಾನು ಒಬ್ಬನೇ ಮಗ ಎಂದು ಹೇಳಿ ಯಮನಪ್ಪನಿಗೆ ಮಕ್ಕಳು ಇಲ್ಲ ಎಂದು ಹೇಳಿ ತಾನು ಒಬ್ಬನೇ ವಾರಸುದಾರ ಎಂದು ಹೇಳಿ ಸನ್ 2016-17 ರಲ್ಲಿ ಖೊಟ್ಟಿ ವರದಿ ಸಲ್ಲಿಸಿ ತನ್ನ ಹೆಸರನ್ನು ದಾಖಲು ಮಾಡಿಕೊಂಡಿದ್ದಾರೆ ಎಂದರೆ ನಿಜ. ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ಮುಂದುವರೆದು ಹೇಳುತ್ತಾರೆ. 1 ನೇ ರಿಂದ 7 ನೇ ಪ್ರತಿವಾದಿಗಳು ಅಂದಾನಪ್ಪನಿಗೆ ವಾಟ್ನಿ ಮಾಡಿಕೊಳೋಣ ಎಂದು ಹೇಳುತ್ತಾ ಬಂದಿದ್ದರು ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. 1 ರಿಂದ 7 ನೇ ಪ್ರತಿವಾದಿಗಳು ನನ್ನ ವಿರುದ್ಧ ಓ.ಎಸ್. ನಂಬರ 215/2018 ರಂತೆ ಪಾಲುವಾಟ್ನಿಗಾಗಿ ಇದೇ ನ್ಯಾಯಾಲಯದಲ್ಲಿ ದಾವಾ ಆಸ್ತಿಗೆ ಸಂಬಂದಿಸಿದಂತೆ ದಾವೆ ಹಾಕಿದ್ದಾರೆ ಎಂದರೆ ನಿಜ. ಅಂದಾನಪ್ಪನಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡುವಂತಹ ಸಂಪೂರ್ಣ ಹಕ್ಕು ಇರುವುದಿಲ್ಲ ಎಂದರೆ ಸಾಕ್ಷಿ ನಾನು ಅವನ ಹೆಸರಿನಲ್ಲಿ ಉತಾರ ಇರುವುದನ್ನು ನೋಡಿ ಖರೀದಿ ಮಾಡಿರುತ್ತೇನೆ. ನಾನು ಮತ್ತು ಅಂದಾನಪ್ಪ ಸೇರಿ ಒಂದು ಖೊಟ್ಟಿ

ಕಾಗದ ತಯಾರಿಸಿದ್ದೇವೆ ಎಂದರೆ ಸರಿಯಲ್ಲ. ನಾನು ಖರೀದಿ ಮಾಡಿದ ನಂತರ 1 ರಿಂದ 7 ನೇ ಪ್ರತಿವಾದಿಗಳು ದಾವಾ ಆಸ್ತಿಯನ್ನು ನನ್ನ ಹೆಸರಿಗೆ ಖಾತೆ ಮಾಡಬೇಡಿ ಎಂದು ತಕರಾರು ಕೊಟ್ಟಿದ್ದರು ಎಂದರೆ ನಿಜ. ತಹಶೀಲ್ದಾರರು ಪ್ರತಿವಾದಿಗಳು ಕೊಟ್ಟಂತಹ ತಕರಾರನು ತಳ್ಳಿ ಹಾಕಿ ಎಚ್.59/2016-17 ರಂತೆ ನನ್ನ ಹೆಸರನ್ನು ನಮೂದು ಮಾಡಿದ್ದಾರೆ ಎಂದರೆ ನಿಜ. ಎ.ಸಿ. ನ್ಯಾಯಾಲಯದಲ್ಲಿ ಪ್ರತಿವಾದಿಗಳು ತಹಶೀಲ್ದಾರ ಆದೇಶ ವಿರುದ್ಧ ಮೇಲ್ಮನವಿ ಸಲ್ಲಿಸ್ಸಿದ್ದರು ಎಂದರೆ ನಿಜ, ನಾನು ಅದರಲ್ಲಿ ಹಾಜರಾಗಿದ್ದೇ ಎಂದರೆ ನಿಜ. ದಿನಾಂಕಃ 04-02-2020 ರಂದು ಎ.ಸಿ.ರವರು ನನ್ನ ಹೆಸರು ಡಿಲಿಟ್ ಮಾಡಲು ಆದೇಶ ಮಾಡಿದ್ದರು ಎಂದರೆ ನಿಜ. ಎ.ಸಿ. ಆದೇಶದ ಪ್ರಕಾರ ನನ್ನ ಹೆಸರು ಡಿಲಿಟ್ ಆಗಿ ಅಂದಾನಪ್ಪ ಮತ್ತು 1 ರಿಂದ 7 ನೇ ಪ್ರತಿವಾದಿಯರ ಹೆಸರು ನಮೂದು ಆಗಿದೆ ಎಂದರೆ ನಿಜ.

6. ಅಂದಾನಪ್ಪ ತನ್ನ ಹೆಸರನ್ನು ದಾಖಲಿಸಿಕೊಂಡಿದ್ದನು ಪುಷ್ಟಿಕರಿಸಲು ತರಾತುರಿಯಲ್ಲಿ ನನ್ನ ಹೆಸರಿಗೆ ಒಂದು ಖೊಟ್ಟಿ ಖರೀದಿ ಪತ್ರ ಮಾಡಿಕೊಟ್ಟಿದ್ದಾರೆ ಎಂದರ ಸರಿಯಲ್ಲ. ಅಂದಾನಪ್ಪ ಸದರಿ ಜಮೀನಿನ ಅರ್ಧ ಭಾಗದಲ್ಲಿ ಮಾತ್ರ ಕಬ್ಜಾ ಇದ್ದ ಎಂದರೆ ಸರಿಯಲ್ಲ. ನನಗೆ ಖರೀದಿ ಪತ್ರದ ಮೂಲಕ ನನಗೆ ದಾವಾ ಜವಿಉೀನಿನ ಮಾಲ್ಕಿ ಮತ್ತು ಕಬ್ಜಾ ಬಂದಿಲ್ಲ ಎಂದರೆ ಸಾಕ್ಷಿ ನಾನು ಕಬ್ಜಾ

ತೆಗೆದುಕೊಳ್ಳಲು ಹೋದಾಗ ಪ್ರತಿವಾದಿಯರು ಗಲಾಟೆ ಮಾಡಿದ್ದಾರೆ. ಓ.ಎಸ್.215/2018 ರಲ್ಲಿ ತೀರ್ಪು ಪ್ರತಿವಾದಿಯರ ಪರ ಬರಬಹುದು ಎಂದು ನಾನು ಭಯಭೀತನಾಗಿ ಈ ದಾವೆ ಹಾಕಿದ್ದೇನೆ ಎಂದರೆ ನಿಜ. 1 ರಿಂದ 7 ನೇ ಪ್ರತಿವಾದಿಗಳಳಿಗ ದಾವಾ ಜಮೀನು ಬಿಟ್ಟು ಬೇರೆಯಾವ ಜಮೀನು ಇಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ದಿನಾಂಕಃ 24-10-2020 ರಂದು ಪ್ರತಿವಾದಿಗಳು ದಾವಾ ಜಮೀನಿನ ಉತ್ತರ ಭಾಗದಲ್ಲಿ ಕಡ್ಲಿ ಪೀಕು ಬಿತ್ತಿದ್ದರು ಎಂದರೆ ನಿಜ. ನಾನು ಹುನಗುಂದದಿಂದ ನನ್ನ ಟ್ರ್ಯಾಕ್ಟರ ತೆಗೆದುಕೊಂಡು ಪ್ರತಿವಾದಿಯರು ಬಿತ್ತಿದ್ದ ಕಡ್ಲಿ ಪೀಕನ್ನು ಹರಗಲು ಹೋಗಿದ್ದೇವು ಎಂದರೆ ಸಾಕ್ಷಿ ನಾನು ಬಿತ್ತಲು ಹೋಗಿದ್ದೇ ಎಂದು ಹೇಳುತ್ತಾರೆ. ನಾನು ಆ ರೀತಿ ಹೋದಾಗ ಪ್ರತಿವಾದಿಯರು ನರೇಗಲ್ಲ ಪೊಲೀಸ್ ಠಾಣೆಯಲ್ಲಿ ನಮ್ಮ ವಿರುದ್ಧ ದೂರನ್ನು ನೀಡಿದ್ದರು ಹಾಗೂ ನರೇಗಲ್ಲ ಪಿ.ಎಸ್.ಕ್ರಮೈ ನಂಬರ 80/2020 ರಂತೆ ನನ್ನ ವಿರುದ್ಧ ದೂರು ದಾಖಲು ಆಗಿದೆ ಎಂದರೆ ನಿಜ. ಸದರಿ ದೂರನ್ನು ಈಗ ನೋಡುತ್ತಿದ್ದೇನೆ, ಅದನ್ನು ಸಾಕ್ಷಿ ನೋಡಿ ಒಪ್ಪಿದ್ದರಿಂದ ಅದನ್ನು ನಿಡಿ-2 ಎಂದು ಗುರುತಿಸಲಾಯಿತು. ನಾನು ಕೋರ್ಟ ಆರ್ಡರನ್ನು ತೆಗೆದುಕೊಂಡು ಹೋಗಿದ್ದೆ ಎಂದು ಸಾಕ್ಷಿ ಮುಂದುವರೆದು ಹೇಳುತ್ತಾರೆ. ಆ ಟ್ರ್ಯಾಕ್ಟರ 7-8 ದಿನಗಳ ಕಾಲ ಅಲ್ಲೇ ಇತ್ತು ಎಂದರೆ ಸರಿಯಲ್ಲ. ಸದರಿ ಟ್ರ್ಯಾಕ್ಟರನ್ನು ನಾನು ಕೋರ್ಟ ಮೂಲಕ ಬಿಡಿಸಿಕೊಂಡೆ.

ಆ ದಿನಾಂಕದಿಂದ ನಾನು ಮತ್ತೆ ಆ ಹೊಲಕ್ಕೆ ಹೋಗಿಲ್ಲ ಎಂದರೆ ನಿಜ. ಅಂದಾನಪ್ಪನ ಮಗ ನನ್ನ ಅಳಿಯ.

7. ಅಂದಾನಪ್ಪ ಮಾಡಿದಂತಹ ಕೃತ್ಯಗಳನ್ನು ಮುಚ್ಚಿ ಹಾಕಲು ಈ ಸುಳ್ಳು ದಾವೆಯನ್ನು ಮಾಡಿದ್ದೇನೆ ಎಂದರೆ ಸರಿಯಲ್ಲ. ಈಗಲೂ ಸಹ 1 ರಿಂದ 7 ನೇ ಪ್ರತಿವಾದಿಯರ ಕಬ್ಜದಲ್ಲಿ ಜಮೀನು ಇದೆ ನನಗೆ ಆ ಬಗ್ಗೆ ಗೊತ್ತಿಲ್ಲ. ಈ ಜಮೀನನ್ನು ನನ್ನ ಅಳಿಯ ಮಾಡುತ್ತಿದ್ದಾನೆ. ನನ್ನ ಅಳಿಯ ಈ ಜಮೀನಿನನು್ನ ಸಾಗುವಳಿ ಮಾಡುತ್ತಿದ್ದಾನೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಮಾಡಿಲ್ಲ. ನಾನು ಜಮೀನು ಖರೀದಿ ಮಾಡಿದ ನಂತರ ಅಲ್ಲಿ ಉಳುಮೆ ಮಾಡುತ್ತಿದ್ದೇನೆ ಎಂದು ತೋರಿಸಲು ಯಾವ ದಾಖಲಾತಿ ಇದೇ ಎಂದರೆ ಸಾಕ್ಷಿ ನನ್ನ ಅಳಿಯದನಿಗೆ ಬಿಟ್ಟುಕೊಟ್ಟಿದ್ದೇನೆ ಎಂದು ಹೇಳುತ್ತಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ಆದಿತ್ಯ ಆರ್ ಕಲಾಲ್ )**
**ಹೆಚ್ಚುವರಿ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ**
ನ್ಯಾಯಾಧೀಶರು ರೋಣ.